ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೇಂದ್ರ ಸರ್ಕಾರದಿಂದ ಅನುದಾನವಿದೆ. ಆದರೆ, ಯಾವುದರಲ್ಲಿ ಎಷ್ಟೆಷ್ಟು ಅನುದಾನವಿದೆಯೆಂಬ ಬಗ್ಗೆ ತಾವು ಪ್ರತ್ಯೇಕ ಪ್ರಶ್ನೆ ಕೇಳಿದರೆ ನಾನು ತಮಗೆ ಮಾಹಿತಿ ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಮ್ಮ ಪ್ರಶ್ನೆ ಸಂಖ್ಯೆ : 201(1508) ಕಾನೂನು ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಯನ್ನು ಮುಂದಿನ ವಾರವಾದರೂ ಆ ಇಲಾಖೆ ಬಂದಾಗ ತೆಗೆದುಕೊಳ್ಳಿ, ಪೆಂಡಿಂಗ್ ಇಡಬೇಡಿ.

ಉಪಾಧ್ಯಕ್ಷರು : ಆಯಿತು.

ಗದಗ್ ಜಿಲ್ಲೆ ಬಂಕದಕಟ್ಟಿ ಪ್ರಾಣಿ ಸಂಗ್ರಹಾಲಯ

202 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗದಗದ ಜಿಲ್ಲೆ ಬಂಕದಕಟ್ಟಿ ಪ್ರಾಣಿ ಸಂಗ್ರಹಾಲಯದಲ್ಲಿ 98 ಮಾರ್ಚ್ ಅಂತ್ಯದಲ್ಲಿ ಇದ್ದ ಪ್ರಾಣಿಗಳ ಸಂಖ್ಯೆ ಎಷ್ಟು?*

ಆ) *ಈ ಪ್ರಾಣಿ ಸಂಗ್ರಹಾಲಯಕ್ಕೆ ಕಳೆದ ಒಂದು ವರ್ಷದಲ್ಲಿ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ ಎಷ್ಟು?*

ಇ) *ಪ್ರಾಣಿ ಸಂಗ್ರಹಾಲಯ ಪ್ರವೇಶ ಶುಲ್ಕ ಕಡಿಮೆ ಮಾಡಲು, ಶಾಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಈ) *ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ ಇರುವ ಪ್ರವೇಶ ಶುಲ್ಕವೆಷ್ಟು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಪ್ರಾಣಿಗಳು -- 210
ಪಕ್ಷಿಗಳು - 76

ಆ) 1997-98ನೇ ಸಾಲಿನಲ್ಲಿ 13,800 ಮಕ್ಕಳು ಹಾಗೂ 24,594 ವಯಸ್ಕರು ಒಟ್ಟು 38,894 ಜನ ವೀಕ್ಷಿಸಿರುತ್ತಾರೆ.

ಇ) ಪ್ರವೇಶ ಶುಲ್ಕ ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ವಯಸ್ಕರಿಗೆ ರೂ. 8.00
ಮಕ್ಕಳಿಗೆ ರೂ. 2.00
(5ರಿಂದ 10 ವರ್ಷದವರಿಗೆ)
5 ವರ್ಷದ ಕೆಳಗಿನ ಮಕ್ಕಳಿಗೆ ಉಚಿತ

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿರುವ ಸದರಿ ಪ್ರಾಣಿ ಸಂಗ್ರಹಾಲಯಕ್ಕೆ ಮೈಸೂರು ಪ್ರಾಣಿ ಸಂಗ್ರಹಾಲಯದಷ್ಟೇ ಮಹತ್ವ ಕೊಟ್ಟು ಒಂಭತ್ತನೇ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ ಮೈಸೂರು ಪ್ರಾಣಿ ಸಂಗ್ರಹಾಲಯದ ಮಟ್ಟಕ್ಕೆ ತರಲು ಕಾರ್ಯಕ್ರಮ ಹಾಕಿಕೊಳ್ಳುವಿರಾ?

ಶ್ರೀ ಡಿ. ಮಂಜುನಾಥ್ : 1997-98ನೇ ಸಾಲಿನಲ್ಲಿ ಗದಗ ಜಿಲ್ಲೆಯ ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯಕ್ಕೆ ಖರ್ಚಾಗಿದ್ದು 6,63,000 ರೂಪಾಯಿಗಳಾದರೆ, ಅದರಿಂದ ಉತ್ಪತ್ತಿ ಬರುವುದು 78,282 ರೂಪಾಯಿಗಳು. ಈಗ ಸದರಿ ಪ್ರಾಣಿ ಸಂಗ್ರಹಾಲಯ ಬಹಳ ನಷ್ಟದಲ್ಲಿದ್ದು ಅಗತ್ಯತೆಯ ದೃಷ್ಟಿಯಿಂದ ಸದರಿ ಪ್ರಾಣಿ ಸಂಗ್ರಹಾಲಯ ಇರಬೇಕು. ಅಲ್ಲಿನ ಪ್ರಾಣಿ ಸಂಗ್ರಹಾಲಯಕ್ಕೆ ಪ್ರವೇಶ ದರ ವಯಸ್ಕರಿಗೆ ಮೂರು ರೂಪಾಯಿಗಳಿದ್ದರೆ ಮಕ್ಕಳಿಗೆ ಒಂದು ರೂಪಾಯಿ. ಈ ಪ್ರಾಣಿ ಸಂಗ್ರಹಾಲಯವನ್ನು ಮೈಸೂರು ಪ್ರಾಣಿ ಸಂಗ್ರಹಾಲಯದ ಮಟ್ಟಕ್ಕೆ ತರುವುದು ಕಷ್ಟವಾಗುತ್ತದೆ. ಏಕೆಂದರೆ ಮೈಸೂರು ಪ್ರಾಣಿ ಸಂಗ್ರಹಾಲಯ ನೋಡಿಕೊಳ್ಳಲು ಒಂದು 'ಜೂ ಅಥಾರಿಟಿ' ಮಾಡಿದ್ದು ಅದಕ್ಕೆ ಒಬ್ಬರು ನಿರ್ದೇಶಕರಿರುತ್ತಾರೆ. ಇದು ಮಹಾರಾಜರ ಕಾಲದಿಂದಲೂ ಇದೆ. ಅಲ್ಲಿನ ಪ್ರವೇಶ ದರ ವಯಸ್ಕರಿಗೆ ಎಂಟು ರೂಪಾಯಿಗಳಾದರೆ, ಮಕ್ಕಳಿಗೆ ಅಂದರೆ ಐದರಿಂದ ಹತ್ತು ವರ್ಷದವರಿಗೆ ಎರಡು ರೂಪಾಯಿಗಳಿದ್ದು ಐದು ವರ್ಷಕ್ಕಿಂತಲೂ ಕಡಿಮೆಯಿರುವ ಚಿಕ್ಕ ಮಕ್ಕಳಿಗೆ ಉಚಿತವಾಗಿ ಬಿಡಲಾಗುತ್ತಿದೆ. ಆದುದರಿಂದ, ಬಿಂಕದಕಟ್ಟೆ ಪ್ರಾಣಿ ಸಂಗ್ರಹಾಲಯವನ್ನು ಸ್ವಲ್ಪ ಅಭಿವೃದ್ಧಿಗೊಳಿಸುವುದಕ್ಕೆ ನಾವು ಪ್ರಯತ್ನಿಸುತ್ತೇವೆ.

ಕೊಡಗು ಜಿಲ್ಲೆಯಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚುವುದು

204 - ಶ್ರೀ ಡಿ.ಎನ್. ಮಾದಪ್ಪ (ಮಡಿಕೇರಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಇರುವ ಒಟ್ಟು ಸಾರಾಯಿ ಅಂಗಡಿಗಳೆಷ್ಟು ಹಾಗೂ ಇವುಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಎಷ್ಟು? ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) 1997-98ನೇ ಸಾಲಿಗೆ ಕೊಡಗು ಜಿಲ್ಲೆಯಲ್ಲಿ 253 ಸಾರಾಯಿ ಅಂಗಡಿಗಳಿಗೆ ಸನ್ನದುಗಳು ನೀಡಲಾಗಿದೆ. ಇವುಗಳಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಇರುವುದಿಲ್ಲ. ಇಂತಹ ಅನಧಿಕೃತ ಅಂಗಡಿಗಳಿರುವುದು ಗಮನಕ್ಕೆ ಬಂದಾಗ ಕಾನೂನು ಪ್ರಕಾರ ಅವುಗಳನ್ನು ಮುಚ್ಚಲು ಕ್ರಮ ಜರುಗಿಸಲಾಗಿದೆ.

ಶ್ರೀ ಡಿ.ಎಸ್. ಮಾದಪ್ಪ : ಮಾನ್ಯ ಉಪಾಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಅಧಿಕೃತ ಸಾರಾಯಿ ಅಂಗಡಿಗಳು ಎಷ್ಟಿವೆಯೆಂದು ಕೇಳಿರುವುದಕ್ಕೆ ಉತ್ತರವಾಗಿ 253 ಎಂದು, ಮತ್ತು ಅನಧಿಕೃತವಾಗಿ ಯಾವುದೇ ಸಾರಾಯಿ ಅಂಗಡಿಗಳಿರುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ, ಕೊಡಗು ಜಿಲ್ಲೆಯಲ್ಲಿ ತಿಳಿದಿರುವಂತೆ ಸುಮಾರು ನಾಲ್ಕು ನೂರಕ್ಕಿಂತಲೂ ಹೆಚ್ಚು ಸಾರಾಯಿ ಅಂಗಡಿಗಳಿದ್ದು ಬಹಳಷ್ಟು